# ಸುದ್ದಿಸಂಚಯ

## ವಿವಿಧ ಕಾರ್ಯಕ್ರಮಗಳು

ಕೇರಳ ರಾಜ್ಯದ ತ್ರಿಶೂರು ರಾಮಕೃಷ್ಣ ಮಠ ಮತ್ತು ಅದರ ವತಿಯಿಂದ ನಡೆಯುತ್ತಿರುವ ಶಾಲೆಯಾದ ರಾಮಕೃಷ್ಣ ಗುರುಕುಲ ವಿದ್ಯಾಮಂದಿರಗಳು ತಮ್ಮ ಎಪ್ಪತ್ತೈದು ವರ್ಷಗಳ ಸಾರ್ಥಕ ಸೇವೆಯ ಅಮೃತ ಮಹೋತ್ಸವವನ್ನು ಆಚರಿಸಿದವು—ಸೆಪ್ಟೆಂಬರ್ ೨೪ರಂದು. ಕೇರಳದ ರಾಜ್ಯಪಾಲರಾದ ಶ್ರೀ ಸಿಕಂದರ್ ಬಖ್ತ್ ಅವರು ಸಮಾರಂಭವನ್ನು ಉದ್ಘಾಟಿಸಿದರು. ಈ ಸಂದರ್ಭದಲ್ಲಿ ಅವರು ಮಾತನಾಡುತ್ತ ಶ್ರೀರಾಮಕೃಷ್ಣ-ವಿವೇಕಾನಂದ ಸಂದೇಶಗಳ ಪ್ರಸ್ತುತತೆಯನ್ನು ಪ್ರಸ್ತಾಪಿಸಿ, ರಾಮಕೃಷ್ಣ ಮಹಾಸಂಘದ ವಿಶಿಷ್ಟ ಸೇವೆಯನ್ನು ಪ್ರಶಂಸಿಸಿದರು.

ಅಕ್ಟೋಬರ್ ೪ರಂದು ರಾಮಕೃಷ್ಣ ಮಹಾಸಂಘದ ಪ್ರಧಾನ ಕಾರ್ಯದರ್ಶಿಗಳಾದ ಸ್ವಾಮಿ ಸ್ಮರಣಾನಂದಜಿಯವರು ಪಶ್ಚಿಮ ಬಂಗಾಳದಲ್ಲಿನ ಅಸಾನ್‌ಸೋಲ್ ರಾಮಕೃಷ್ಣ ಆಶ್ರಮದ ಶಾಲೆಯ ನೂತನ ಕಟ್ಟಡವನ್ನು ಉದ್ಘಾಟಿಸಿದರು. ಅದೇ ಸಂದರ್ಭದಲ್ಲಿ ಅವರು ಅಲ್ಲಿ ಹೊಸದಾಗಿ ಸ್ಥಾಪಿತವಾದ ಸ್ವಾಮಿ ವಿವೇಕಾನಂದರ ಪ್ರತಿಮೆಯನ್ನೂ ಅನಾವರಣಗೊಳಿಸಿದರು.

ಸಿಕ್ರಾಕುಲಿಂಗ್ರಾಂ ಆಶ್ರಮದವರು ಸ್ಥಳೀಯ ನಗರಸಭೆಯ ಸಹಕಾರದೊಂದಿಗೆ ಬಾರಿಶಾತ್ (ಪಶ್ಚಿಮ ಬಂಗಾಳ) ನಲ್ಲಿ ಸ್ವಾಮಿ ವಿವೇಕಾನಂದರ ಪ್ರತಿಮೆಯನ್ನು ಹೊಸದಾಗಿ ಪ್ರತಿಷ್ಠಾಪಿಸಿದರು. ಸಂಘದ ಉಪಾಧ್ಯಕ್ಷರಾದ ಸ್ವಾಮಿ ಗಹನಾನಂದಜಿಯವರು ೯.೧೦.೨೦೦೨ರಂದು ಅದರ ಅನಾವರಣ ಮಾಡಿದರು. ಈ ಸಂದರ್ಭದಲ್ಲಿ ನಡೆದ ಸಾರ್ವಜನಿಕ ಸಭೆಯಲ್ಲಿ ಸಹಕಾರ್ಯದರ್ಶಿಗಳಾದ ಸ್ವಾಮಿ ಶಿವಮಯಾನಂದಜಿಯವರು ಮಾತನಾಡಿದರು.

ನವದೆಹಲಿ ರಾಮಕೃಷ್ಣ ಮಿಷನ್ನಿನ ಅಮೃತ ಮಹೋತ್ಸವದ ಸಮಾರೋಪವನ್ನು ನವೆಂಬರ್ ೩ರಿಂದ ೧೧ರವರೆಗೆ ಆಚರಿಸಲಾಯಿತು. ಇದೇ ಸಂದರ್ಭದಲ್ಲಿ ರಾಮಕೃಷ್ಣ ಮಹಾಸಂಘದ ಅಧ್ಯಕ್ಷರಾದ ಶ್ರೀಮತ್ ಸ್ವಾಮಿ ರಂಗನಾಥಾನಂದಜಿ ಮಹಾರಾಜ್ ಅವರು ೩.೧೧.೨೦೦೨ರಂದು ನೂತನ ಹವಾನಿಯಂತ್ರಿತ ಸಭಾಂಗಣವನ್ನು ಉದ್ಘಾಟಿಸಿದರು. ಒಂದು ವಾರದ ಈ ಸುದೀರ್ಘ ಕಾರ್ಯಕ್ರಮದಲ್ಲಿ ರಾಮಕೃಷ್ಣ ಸಂಘದ ಅನೇಕ ಹಿರಿಯ ಸ್ವಾಮಿಗಳು ಉಪನ್ಯಾಸಗಳನ್ನು ನೀಡಿದರು. ರಶೀದ್‌ಖಾನ್ ಅವರ ಸಂಗೀತ, ಸ್ವಾಮಿ ಶಶಾಂಕಾನಂದಜಿಯವರಿಂದ ರಾಮಕೃಷ್ಣ ಚರಿತ ಮಾನಸದ ಗಾನಪ್ರವಚನ, ಪಂಡಿತ್ ಸುನೀಲ್ ಮುಖರ್ಜಿಯವರ ಸರೋಡ್ ವಾದನ ಇವು ಮುಖ್ಯ ಸಾಂಸ್ಕೃತಿಕ ಕಾರ್ಯಕ್ರಮಗಳಾಗಿದ್ದವು. ೬.೧೧.೨೦೦೨ ರಂದು ಒಂದು ಭಕ್ತಸಮ್ಮೇಳನವನ್ನೂ ನಡೆಸಲಾಯಿತು. ೧೦.೧೧.೨೦೦೨ರಂದು ವಿದ್ಯಾರ್ಥಿಗಳಿಗಾಗಿ ಮೌಲ್ಯ ಪರಿಚಯ ಕಾರ್ಯಕ್ರಮವನ್ನು ಆಯೋಜಿಸಲಾಗಿತ್ತು. ಮಾನ್ಯ ಮುಖ್ಯಮಂತ್ರಿಗಳಾದ ಶ್ರೀಮತಿ ಶೀಲಾ ದೀಕ್ಷಿತ್ ಅವರು ಕಾರ್ಯಕ್ರಮವನ್ನು ಉದ್ಘಾಟಿಸಿದರು.

ಬಂಗ್ಲಾದೇಶದ ಢಾಕಾ, ಬರಿಸಾಲ್, ದಿನಾಜ್‌ಪುರ್, ನಾರಾಯಣಗಂಜ್, ಸಿಲ್ಹಟ್ ಮುಂತಾದ ಸ್ಥಳಗಳಲ್ಲಿ ದುರ್ಗಾ ಪೂಜೆಯನ್ನು ಪ್ರತಿವರ್ಷದಂತೆ ಆಚರಿಸಲಾಯಿತು. ಈ ಉತ್ಸವಕ್ಕೆ ಬಂಗ್ಲಾದೇಶದ ಈ ಕೆಳಗಿನ ಗಣ್ಯವ್ಯಕ್ತಿಗಳು ಭಾಗವಹಿಸಿದ್ದರು: ಮಾಜಿ ಪ್ರಧಾನಿಗಳಾದ ಷೇಕ್ ಹಸೀನಾ, ಮಾಜಿ ಅಧ್ಯಕ್ಷರಾದ ಹೆಚ್.ಎಂ. ಈರ್ಷದ್, ಗ್ರಾಮಾಭಿವೃದ್ಧಿ ಸಚಿವ ಅಬ್ದುಲ್ ಮನ್ನನ್ ಭುಯಾನ್, ಗೃಹಸಚಿವ ಆಲ್ತಾಫ್ ಹುಸೇನ್ ಚೌಧುರಿ, ಅರ್ಥಸಚಿವ ಸೈಫುರ್ ರೆಹಮಾನ್ ಮತ್ತು ಇತರರು. ❄

### ತಿದ್ದುಪಡಿ

ನವೆಂಬರ್ ಸಂಚಿಕೆಯ ೨೭ನೇ ಪುಟದಲ್ಲಿ "ಆಚಿಮಾಡ ಕಾಳಮ್ಮಯ್ಯ" ಎಂಬುದನ್ನು "ಅಚ್ಚಿಯಂಡ ಕಾಳಮಯ್ಯ" ಎಂದೂ ಅದೇ ಪುಟದಲ್ಲಿ "ಪಟ್ಟಡಮನೆಯವರೂ" ಎಂಬುದನ್ನು "ತೇಲಪಂಡ ಮನೆಯವರೂ" ಎಂದು ಓದಬೇಕಾಗಿ ವಿನಂತಿ. ಈ ಪ್ರಮಾದಗಳಿಗಾಗಿ ವಿಷಾದಿಸುತ್ತೇವೆ.

## ಶ್ರೀರಾಮಕೃಷ್ಣ-ವಿವೇಕಾನಂದ ಭಕ್ತ ಸಮ್ಮೇಳನ

**2003 ನೇ ಫೆಬ್ರವರಿ 23,24,25 ಮತ್ತು 26 ರಂದು ಅಖಿಲ ಕರ್ನಾಟಕ ರಾಮಕೃಷ್ಣ-ವಿವೇಕಾನಂದ ಭಕ್ತ ಸಮ್ಮೇಳನ ಈ ಸಮ್ಮೇಳನವು ರಾಮಕೃಷ್ಣ ಮಠ ಮತ್ತು ಮಿಷನ್ನಿನ ಟ್ರಸ್ಟಿಗಳು ಹಾಗೂ ಚೆನ್ನೈನ ಶ್ರೀರಾಮಕೃಷ್ಣ ಮಠದ ಅಧ್ಯಕ್ಷರಾದ ಪೂಜ್ಯ ಶ್ರೀಮತ್ ಸ್ವಾಮಿ ಗೌತಮಾನಂದಜೀ ಮಹಾರಾಜ್‌ರವರ ದಿವ್ಯ ನೇತೃತ್ವದಲ್ಲಿ, ರಾಮಕೃಷ್ಣ ಮಹಾಸಂಘದ ಹಿರಿಯ ಯತಿಗಳ ಮಾರ್ಗದರ್ಶನದಲ್ಲಿ, ಬಿಜಾಪುರದ ಶ್ರೀರಾಮಕೃಷ್ಣ-ವಿವೇಕಾನಂದ ಆಶ್ರಮದಲ್ಲಿ ನೆರವೇರಲಿದೆ.**

ಈ ಸಮ್ಮೇಳನದಲ್ಲಿ ಭಾಗವಹಿಸಲಿಚ್ಛಿಸುವವರು ತಮ್ಮ ಸಮೀಪದ ರಾಮಕೃಷ್ಣಾಶ್ರಮದಲ್ಲಿ ಸಮ್ಮೇಳನಕ್ಕೆ ಸಂಬಂಧಿಸಿದ ಪ್ರವೇಶ ಅರ್ಜಿಯನ್ನು ಪಡೆದು, ಭರ್ತಿ ಮಾಡಿದ ಅರ್ಜಿಗಳನ್ನು ಪ್ರತಿನಿಧಿ ಶುಲ್ಕ ರೂ.350/-ರೊಂದಿಗೆ ದಿನಾಂಕ **15-1-2003**ರೊಳಗೆ ಕೆಳಗೆ ತಿಳಿಸಿರುವ ಬಿಜಾಪುರ ಆಶ್ರಮದ ವಿಳಾಸಕ್ಕೆ ತಲುಪಿಸಬೇಕೆಂದು ಕೋರುತ್ತೇವೆ.

**ಶ್ರೀರಾಮಕೃಷ್ಣ-ವಿವೇಕಾನಂದ ಆಶ್ರಮ, ಸರ್‌ನಾಯಕ್ ಬಂಗಲೆ, ಶಾಸನೂರು ದವಾಖಾನೆ ಎದುರು,**
**ಸ್ಟೇಷನ್ ರಸ್ತೆ, ಬಿಜಾಪುರ - 586 104. ದೂರವಾಣಿ : (0835) 259349**